ಅವರ ಅಹವಾಲುಗಳನ್ನು ಕೇಳಿ ಅವರಿಗೆ ಸೂಕ್ತವಾದಂತಹ ಪರಿಹಾರವನ್ನು ಒದಗಿಸುವುದರ ಕಡೆಗೆ ನಾವು ಗಮನ ಕೊಡಬೇಕಾಗಿದೆ.

ಶ್ರೀ ಎಂ.ಪಿ. ಪ್ರಕಾಶ್(ಕಂದಾಯ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಪ್ರಜಾಪ್ರಭುತ್ವದಲ್ಲಿ ಪ್ರತಿಭಟನೆ ಒಂದು ಸಹಜವಾದ ಅಸ್ತ್ರವಾಗಿದೆ. ಆ ಕಾರಣಕ್ಕಾಗಿ ಅವರನ್ನು ಗೌರವದಿಂದ ಕಾಣಬೇಕು ಸರ್ಕಾರ ಅದಕ್ಕೆ ಸ್ಪಂದಿಸಬೇಕೆಂದು ಏನು ಇದೆ, ಅದು ನಿಜವಾಗಿಯೂ ಒಪ್ಪುವಂತಹ ವಿಷಯವಾಗಿದೆ. ಯಾವುದಾದರೂ ಸಂದರ್ಭದಲ್ಲಿ ನಾವು ಈ ಸದನ ನಡೆಯುತ್ತಿದ್ದ ಕಾರಣಕ್ಕಾಗಿ ಪ್ರಾಯಶಃ ಹೋಗುವುದಕ್ಕಾಗಲಿಲ್ಲ, ಆದರೆ ನಾವು ಈ ದಿವಸ ಯಾರಾದರೂ ಒಬ್ಬರು ಹೋಗಿ ಪ್ರತಿಭಟನೆ ಮಾಡತಕ್ಕಂತಹ ಆ ಪ್ರತಿನಿಧಿಗಳ ಜೊತೆಗೆ ಮಾತನಾಡಿ ಅವರ ಸಮಸ್ಯೆಯನ್ನು ಅರ್ಥಮಾಡಿಕೊಂಡು ಯಾವುದು ಪರಿಹಾರ ಮಾಡುವುದಕ್ಕೆ ಸಾಧ್ಯವಾಗುತ್ತದೆ ಅದರ ಬಗ್ಗೆ ಅವರ ಹತ್ತಿರ ಮನವಿಯನ್ನು ಸ್ವೀಕಾರ ಮಾಡುತ್ತೇವೆ. ಸಂಬಂಧಪಟ್ಟ ಮಂತ್ರಿಗಳಿಗೂ ಕೂಡ ಗೌರವ ಧನ ವಿತರಣೆ ಮಾಡುವುದರ ಬಗ್ಗೆ ಕ್ರಮ ಕೈಗೊಳ್ಳುವುದರ ಬಗ್ಗೆ ವಿಚಾರವನ್ನು ಕೂಡ ತಿಳಿಸುತ್ತೇನೆ.

ಉಪಾಧ್ಯಕ್ಷರ ಅಪ್ಪಣೆಯ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು:–

ಶ್ರೀ ಕೆ.ಆರ್. ರಮೇಶ್ ಕುಮಾರ್ (ಶ್ರೀನಿವಾಸಪುರ): ಮಾನ್ಯ ಉಪಾಧ್ಯಕ್ಷರೆ, ಶ್ರೀನಿವಾಸಪುರ ಪ್ರಥಮ ದರ್ಜೆ ಕಾಲೇಜಿನಲ್ಲಿ ಉಪನ್ಯಾಸಕರ ಹುದ್ದೆಗಳೆಲ್ಲಾ ಖಾಲಿ ಇದೆ. ಇಂತಹವರು ನಾವು ಬರುತ್ತೇವೆಂದು ಬರೆದುಕೊಟ್ಟರು ಕೂಡ ಅವರನ್ನು ಕೂಡ ಹಾಕುವುದಿಲ್ಲ. ತಾವಾಗಿಯೇ ಕೂಡ ಅಲ್ಲಿ ಭರ್ತಿಯನ್ನು ಮಾಡುವುದಿಲ್ಲ. ಅದು ಸರ್ಕಾರಿ ಕಾಲೇಜಾಗಿದೆ. ಈಗಾಗಲೇ ನಾವು ಕೋಲಾರ ಜಿಲ್ಲೆಯವರು ಬಹಳ ದೊಡ್ಡ ಗೌರವವನ್ನು ಗಳಿಸಿಕೊಂಡಿದ್ದೇವೆ. ಎಸ್ ಎಸ್ ಎಲ್ ಸಿಯಲ್ಲಿ ಕಡೆಯ ಸ್ಥಾನದಲ್ಲಿದ್ದೇವೆ. ಇದರ ಬಗ್ಗೆ ಮಾನ್ಯ ಮಂತ್ರಿಗಳೂ ದೊಡ್ಡ ಮನಸ್ಸು ಮಾಡಿ ಉಪನ್ಯಾಸಕರನ್ನು ತುಂಬುವಂತಹ ಕೆಲಸವನ್ನು ಮಾಡಬೇಕು.

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು): ಮಾನ್ಯ ಉಪಾಧ್ಯಕ್ಷರೆ, ನಿನ್ನೆಯ ದಿವಸ ಇದರ ಬಗ್ಗೆ ಹೇಳಿದ್ದೇನೆ. ಶಿಕ್ಷಣ ಇಲಾಖೆಯ ಬೇಡಿಕೆಯ ಮೇಲೆ ಚರ್ಚೆಯಾಗುವಂತಹ ಸಂದರ್ಭದಲ್ಲಿ ಹೇಳಿದ್ದೇವೆ. 15ನೇ ತಾರೀಖಿನೊಳಗಾಗಿ ನಾನು ಎಲ್ಲೆಲ್ಲಿ ಹುದ್ದೆಗಳು ಖಾಲಿ ಇದೆ. ಆ ಸ್ಥಳಗಳಿಗೆ ಲೆಕ್ಚರರ್ಸ್‌ನ್ನು ಹಾಕುತ್ತೇವೆಂದು ಹೇಳಿದ್ದೆವೋ ಅದೇ ರೀತಿಯಲ್ಲಿ ಹಾಕುತ್ತೇವೆ.

ಶ್ರೀ ಕೆ.ಆರ್. ರಮೇಶ್ ಕುಮಾರ್: ನಾನು ಅದರ ಬಗ್ಗೆ ನಂಬಿಸುವುದಕ್ಕೆ ಹೋಗುವುದಿಲ್ಲ, ಒಬ್ಬ ಉಪನ್ಯಾಸಕ ಬರುವುದಕ್ಕೆ ತಯಾರಾಗಿದ್ದೇವೆ. ಅಲ್ಲಿ ವೇಕೆನ್ಸಿ

ಇದೆ. ಇಂತಹವರನ್ನು ಹಾಕಿ ಎಂದು ಹೇಳಿದರೆ ಹಾಕುವುದಕ್ಕೆ ನಿಮ್ಮ ಅಧಿಕಾರಿಗಳಿಗೆ ಕಷ್ಟವೆಂದರೆ ಇದು ಟ್ರಾಫಿಕ್ ಇನ್ಸ್‌ಪಕ್ಟರ್ ಪೋಸ್ಟ್? ರೇಂಜ್ ಫಾರೆಸ್ಟ್ ಆಫೀಸರ್ ಪೋಸ್ಟ್ ಪಾಠ ಮಾಡುವಂತಹ ಮೇಷ್ಟ್ರನ್ನು ಹಾಕುವುದಕ್ಕೆ ಯಾತಕ್ಕಾಗಿ ನಿಮ್ಮವರು ಹೀಗೆ ಮಾಡುತ್ತಾರೆ. ಮಂಜುನಾಥ್ ಸಾಹೇಬರವರೆ, ಸರ್ಕಾರಿ ಕಾಲೇಜುಗಳಿಗೆ ಈ ಗತಿ ಮಾಡಿದರೆ ಹೇಗೆ? ಪ್ರೈವೇಟ್‌ನವರ ಜೊತೆಗೆ ನಮ್ಮ ಹುಡುಗರು ಹೋಗಿ ಕಾಂಪಿಟ್ ಮಾಡಬೇಕು.ಸರಿ ಮಾಡುವುದರ ಬಗ್ಗೆ ಒಂದು ಕೆಲಸ ಮಾಡಿ ನಾವು ಬೀಗವನ್ನು ತಂದುಕೊಡುತ್ತೇವೆ. ಎಲ್ಲ ಲಾಕ್ ಮಾಡಿ ಕ್ಲೋಸ್ ಮಾಡಿಬಿಡಿ ನಮಗೇನು ಸಮಸ್ಯೆ ಇರುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಉಪಾಧ್ಯಕ್ಷರೆ, ಇದನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೂ ತರಬೇಕು, ಬಹುಶಃ ಸದನದ ಎಲ್ಲಾ ವರ್ಗದ ಮುಖಂಡರುಗಳೂ ಎಲ್ಲಾ ಪಕ್ಷದ ಮುಖಂಡರುಗಳ ಗಮನಕ್ಕೆ ತರಬೇಕಾಗಿದೆ. ಇದು ಬಹಳ ಪ್ರಾಮುಖ್ಯವಾಗಿರುವಂತಹದ್ದು, ಈ ರಾಜ್ಯದ ಲೋಕಸಭೆ ಮತ್ತು ವಿಧಾನಸಭೆ ಇದನ್ನು ನಾನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇವೆ. ಇದರ ಬಗ್ಗೆ ಮಾನ್ಯ ಸಚಿವರಾದಂತಹ ಪ್ರಕಾಶ್ ವರವರು ಕೂಡ ಕೇಳಬೇಕು. ಕ್ಷೇತ್ರ ವಿಂಗಡಣೆ ಈ ರಾಜ್ಯಕ್ಕೆ ಒಂದು ಸಮಿತಿಯನ್ನು ಮಾಡಿದಾರೆ. ಈ ಸಮಿತಿಯಲ್ಲಿ ಅನೇಕ ಜನರು ಇದ್ದಾರೆ. ಯಾವ ರೀತಿಯಾಗಿ ಸಮಿತಿ ರಚನೆಯಾಯಿತು. ನಮಗೆ ಗೊತ್ತಿಲ್ಲ. ಯಾವ ಯಾವ ಆಧಾರದ ಮೇಲೆ ಸಮಿತಿಯು ರಚನೆಯಾಯಿತು, ಸಮಿತಿಯು ಸಲಹೆಯನ್ನು ಪಡೆಯತಕ್ಕಂಥದ್ದು ಕ್ಷೇತ್ರಗಳ ಪುನರ್ ವಿಂಗಡಣೆ ಮಾಡುವಾಗ, ಸಲಹೆಯನ್ನು ಪಡೆಯುವುದು, ಸಲಹೆಯು ಯಾವಾಗ ಆಯಿತು. ಸಭೆಯನ್ನು ಯಾವಾಗ ನಡೆಸಿದರು. ಈಗಾಗಲೇ ಇದರ ಬಗ್ಗೆ ಕರಡು ವರದಿ ಸಿದ್ಧವಾಗಿದೆ. ಇದು ಕೇಂದ್ರಕ್ಕೆ ಹೋಗಿದೆ ಎಂದು ರಾಜ್ಯದ ಪತ್ರಿಕೆಗಳಲ್ಲಿ ಬಂದಿದೆ. ಈ ಪ್ರಕಾರ ಅನೇಕ ಕಡೆ ಇರತಕ್ಕಂತಹ ಸ್ಥಳಗಳನ್ನು ವಿನಾಃಕಾರಣ ಮೀಸಲು ಸ್ಥಳವನ್ನಾಗಿ ಮಾಡಿದಾರೆ. ಇನ್ನು ಕೆಲವು ಕಡೆಗಳಲ್ಲಿ ಕ್ಷೇತ್ರವನ್ನು ಬದಲಾವಣೆ ಮಾಡಿದ್ದಾರೆ. ಇನ್ನು ಕೆಲವು ಕಡೆ ಕ್ಷೇತ್ರವೇ ಇಲ್ಲ, ಇನ್ನು ಕೆಲವು ಕಡೆಗಳಲ್ಲಿ ಬಹಳ ಬೆಂಗಳೂರು ನಗರದಲ್ಲಿ 20 ಕ್ಷೇತ್ರಗಳನ್ನಾಗಿ ಮಾಡಿದ್ದಾರೆ. 3 ಲೋಕಸಭೆಯನ್ನು ಮಾಡಿದ್ದಾರೆ, ತರಹ ಅನೇಕ ಗೊಂದಲ ಇಡೀ ರಾಜ್ಯದಲ್ಲಿ ಪತ್ರಿಕೆಗಳಲ್ಲಿ ಸ್ವಲ್ಪ ಸ್ವಲ್ಪ ಸುದ್ದಿಗಳು ಬರುತ್ತಿದೆ. ನಮಗೆ ತಿಳಿಸಿರುವಂತಹದ್ದು ವಿಚಾರ ಎಂದು ಬರುತ್ತಿದೆ. ನಾನು ತಮಗೆ ಏನು ಹೇಳುತ್ತಿದ್ದೇನೆಂದರೆ, ಈ ಬಗ್ಗೆ ಸಮಗ್ರವಾಗಿ ಅನೇಕ ವಿಚಾರ ನಮ್ಮ ಎದುರುಗಡೆ ಕುಳಿತಿರುವಂತಹ ಹಿರಿಯ ಸಚಿವರಾದ ಪ್ರಕಾಶ್ ರವರು ಕ್ಷೇತ್ರ ಮೀಸಲು ಸ್ಥಾನ, ಅರಣ್ಯ ಸಚಿವರದು ಮೀಸಲು ಸ್ಥಾನ ಇವೆಲ್ಲವೂ ಪತ್ರಿಕೆಗಳಲ್ಲಿ